ವಿಷಯ:- ವಿಶ್ವಯೋಜನೆಯ ಉದ್ದೇಶಗಳು

1401 : (2307) ಶ್ರೀ ಬಿ. ಶಿವರಾಮು (ಗಂಡಸಿ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ವಿಶ್ವಯೋಜನೆಯ ಉದ್ದೇಶಗಳೇನು ಈ ಬಗ್ಗೆ ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಆ) 'ವಿಶ್ವ' ಯೋಜನೆಗೆ 1992-93, 1993-94, 1994-95 ಮತ್ತು 1995-96ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು? ಖರ್ಚಾಗಿರುವ ಹಣವೆಷ್ಟು? ಮರು ಹೊಂದಾಣಿಕೆಯಲ್ಲಿ ಒದಗಿಸಿದ ಹಣವೆಷ್ಟು?

ಇ) 1996-97ನೇ ಸಾಲಿಗೆ ಒದಗಿಸಿರುವ ಆಯವ್ಯಯದ ಹಣವೆಷ್ಟು? ಮತ್ತು ರೂಪಿಸಿರುವ ಕಾರ್ಯಕ್ರಮಗಳೇನು?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):-

ಅ) 'ವಿಶ್ವ' ಯೋಜನೆಯು ಒಂದು ನಿರಂತರ ಗ್ರಾಮೀಣ ಉತ್ಪನ್ನಕಾರಕ ಯೋಜನೆಯಾಗಿದ್ದು ಈ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ಜನರಿಗೆ ಕೈಗಾರಿಕಾ ಚಟುವಟಿಕೆಗಳಲ್ಲಿ ಸೂಕ್ತ ತರಬೇತಿ ನೀಡಿ, ತರಬೇತಿ ನೀಡಿದ ನಂತರ ಉತ್ಪಾದನೆಯಲ್ಲಿ ತೊಡಗಿಸುವುದು ಹಾಗೂ ಕರಕುಶಲ-ಗಾರರಿಗೆ ಸಾಲ ಸೌಲಭ್ಯ ದೊರಕಿಸಿ ಉತ್ಪಾದನೆಯಲ್ಲಿ ತೊಡಗಿಸುವುದು ಹಾಗೂ ಸದರಿ ತರಬೇತಿ ಹೊಂದಿದ ಹಾಗೂ ಕರಕುಶಲಗಾರರಿಗೆ ಉದ್ಯಮವನ್ನು ಪ್ರಾರಂಭಿಸಲು ಬೇಕಾದ ಸಂಪೂರ್ಣ ಹಣ-ಕಾಸಿನ ಸಾಲದ ಸಹಾಯ ದೊರಕಿಸಿಕೊಡುವುದು, ಮೂಲಭೂತ ಸೌಲಭ್ಯ ಕಚ್ಚಾಪದಾರ್ಥಗಳ ಪೂರೈಕೆ ಹಾಗೂ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು.

ವಿಶ್ವ ಯೋಜನೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು ಕೆಳಕಂಡಂತಿವೆ.

1) ತರಬೇತಿ
2) ಸಾಮಾನ್ಯ ಕಾರ್ಯಾಗಾರಗಳ ನಿರ್ಮಾಣ
3) ವಾಸದ ಕಾರ್ಯಾಗಾರಗಳ ನಿರ್ಮಾಣ
4) ಬೆಳವಣಿಗೆ ಕೇಂದ್ರಗಳು
5) ಆಗರಬತ್ತಿ ಹಾಗೂ ಹೆಂಚು ಇಟ್ಟಿಗೆ, ಇತರೆ ಗುಣಮಟ್ಟದ ಸಂಶೋಧನಾ ಕೇಂದ್ರಗಳ ಸ್ಥಾಪನೆ
6) ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಗಳ ಸ್ಥಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) 1992-93 ರಿಂದ 1995-96ರ ಸಾಲಿನವರೆಗಿನ ಆಯವ್ಯಯದ ವಿವರಗಳು ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಆಯವ್ಯಯ	ಪರಿಷ್ಕೃತ ಅಂದಾಜು	ವೆಚ್ಚ
1)	1992-93	7500.00	5000.00	2197.55
2)	1993-94	6675.68	3015.68	1373.868
3)	1994-95	4950.00	1234.00	947.43
4)	1995-96	1535.00	630.00	606.48

ಯಾವುದೇ ಬೇರೆ ಯೋಜನೆಯಿಂದ ವಿಶ್ವ ಯೋಜನೆಗೆ ಮರು ಹೊಂದಾಣಿಕೆ ಮಾಡಿಲ್ಲ.

ಇ) 1996-97ರ ಸಾಲಿಗೆ ವಿಶ್ವ ಯೋಜನೆಗೆ ಹೊಂದಿಸಿರುವ ಒಟ್ಟು ಆಯವ್ಯಯ ರೂ.1167.00ನ್ನು 1996-97ರ ಸಾಲಿನಲ್ಲಿ ರೂಪಿಸಿರುವ ಕಾರ್ಯಕ್ರಮಗಳು ಕೆಳಕಂಡಂತಿವೆ.

1) ತರಬೇತಿ

2) ವಾಸದ ಕಾರ್ಯಾಗಾರಗಳ ನಿರ್ಮಾಣ

3) ಬೆಳವಣಿಗೆ ಕೇಂದ್ರಗಳ ಸ್ಥಾಪನೆ ಹಾಗೂ ಉತ್ಪಾದನಾ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳು

4) ಆಗರಬತ್ತಿ ಸಂಶೋಧನಾ ಕೇಂದ್ರಕ್ಕೆ ಹಣ ಸಹಾಯ

5) ನಿಗಮ : ಮಂಡಳಿಗಳಿಗೆ ಮಾರ್ಜಿನ್ ಮನಿ ಸಾಲ.

6) ಆಹಾರ ಸಂಸ್ಕರಣಾ ಘಟಕಗಳಿಗೆ ಉತ್ತೇಜನ.

7) ಕಾರ್ಯಾತ್ಮಕ ಕೈಗಾರಿಕಾ ಕ್ಷೇತ್ರಗಳ ಸ್ಥಾಪನೆ.

8) ಕೌಶಲ್ಯ ಧಾಮದ ಸ್ಥಾಪನೆ.

9) ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ಸಂಸ್ಥೆಗಳನ್ನು ಸ್ಥಾಪಿಸುವುದು.

ವಿಷಯ:- ಎಂ.ಆರ್.ಪಿ.ಎಲ್. ಕೈಗಾರಿಕಾ ಸಂಸ್ಥೆಯಲ್ಲಿ ಉದ್ಯೋಗ ನೀಡಿಕೆ.

1403 (2380) ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತೈಲ ಶುದ್ಧೀಕರಣ ಕೇಂದ್ರದಲ್ಲಿ ಎಷ್ಟು ಜನ ಭೂಮಿ ಕಳೆದುಕೊಂಡು ನಿರ್ವಸಿತರಾದ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ? (ಉದ್ಯೋಗ ಹೆಸರು ಮತ್ತು ಹೆಸರುಗಳ ವಿವರ ನೀಡುವುದು)

ಆ) ಒಟ್ಟಾರೆ ಸ್ಥಳೀಯರಿಗೆ ಕೊಟ್ಟ ಉದ್ಯೋಗವೆಷ್ಟು? (ವಿವರ ನೀಡುವುದು)